ಮಿಸ್ ನಂ.5/2022

ಪಿ.ಡಬ್ಲೂಃ 1- ಕೃಷ್ಣಪ್ಪ ಬಿನ್ ಮುನಿಗುರಪ್ಪ

ದಿನಾಂಕಃ 07/04/2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲು 1, 2 ಮತ್ತು 5 ರಿಂದ 8 ನೇ ಎದುರುದಾರರ ಪರವಾಗಿ ಶ್ರೀ ಎಂ ಎಸ್ ಬಿ ವಕೀಲರಿಂದ**

2. ಎಂ.ಎ.ನಂ.27/2004 ಪ್ರಕರಣ ಯಾವ ನ್ಯಾಯಾಲಯದಲ್ಲಿ ನಡೆದಿತ್ತು ಎಂದು ನನಗೆ ಗೊತ್ತಿರುವುದಿಲ್ಲ ಸದರಿ ಪ್ರಕರಣ ಮಾನ್ಯ ಕೋಲಾರ ಪ್ರಧಾನ ಜಿಲ್ಲಾ ನ್ಯಾಯಾಲಯದಲ್ಲಿ ನಡೆದಿತ್ತು ಎಂದರೆ ಇರಬಹುದು ಎಂದು ನುಡಿಯುತ್ತಾರೆ. ಆದೇಶ ಸಂಖ್ಯೆ ಐ.ಎನ್.ಎ.ನಂ.215/1986-87 ಕ್ಕೆ ಸಂಬಂಧಿಸಿ ಯಾವ ಯಾವ ನ್ಯಾಯಾಲಯಗಳಲ್ಲಿ ಯಾವ ಯಾವ ಪ್ರಕರಣಗಳು ನಡೆದಿರುತ್ತವೆ ಎಂದು ನನಗೆ ಹೇಳಲು ಬರುವುದಿಲ್ಲ ಕಾರಣ ನನಗೆ ಆಗ ಕೇವಲ 11 ವರ್ಷ ವಯಸ್ಸಾಗಿತ್ತು. ಸದರಿ ಆದೇಶದ ಮೇಲೆ ಕೋಲಾರ ಪ್ರಧಾನ ಜಿಲ್ಲಾ ನ್ಯಾಯಾಲಯದಲ್ಲಿ ಎಂ.ಎ. ನಂ.31/1989 ಮತ್ತು ಎಂ.ಎ.ನಂ.26/1989 ಪ್ರಕರಣಗಳು ನಡೆದಿರುತ್ತವೆ ಎಂದರೆ ನನಗೆ ಗೊತ್ತಿರುವುದಿಲ್ಲ.

3. ಅಸಲು ದಾವೆ ನಂ.2/2008 ದಾವೆಯಲ್ಲಿ ಎದುರುದಾರರು ದಾಖಲಿಸಿದ್ದರು. ಸದರಿ ದಾವೆಯನ್ನು ದಾಖಲಿಸಿದ ನಂತರ ನಮಗೆ ದಾವೆಯ ಸಮನ್ಸ್ ಬಂದ ನಂತರ ಎದುರುದಾರರು ನಮಗೆ ಭೇಟಿಯಾಗಿ ನಾವು ಸದರಿ ದಾವೆಯಲ್ಲಿ ಹಾಜರಾಗುವ ಅವಶ್ಯಕತೆ ಇರುವುದಿಲ್ಲ ಎಂದು ಹೇಳಿ 3 ದಾಖಲೆಗಳಿಗೆ ನಮ್ಮ ಸಹಿಗಳನ್ನು ಪಡೆದುಕೊಂಡಿದ್ದರು. ಸದರಿ 3 ದಾಖಲೆಗಳನ್ನು ಎದುರುದಾರರು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆಯೋ ಅಥವಾ ಇಲ್ಲವೋ ಎಂದು ನನಗೆ ಗೊತ್ತಿರುವುದಿಲ್ಲ. ಅಸಲು ದಾವೆ ನಂ.2/2008 ರಲ್ಲಿ ನಾವು ನಮ್ಮ ಪರವಾಗಿ ವಕೀಲರನ್ನು ನೇಮಿಸಿ ಅವರ ಮೂಲಕ ನಾವು ವಕಾಲತ್ತನ್ನು ಮತ್ತು ಲಿಖಿತ ಹೇಳಿಕೆಯನ್ನು ದಾಖಲಿಸಿದ್ದೆವು ಎಂದರೆ ಸರಿಯಲ್ಲ. ಸದರಿ ದಾವೆ ದಾಖಲಿಸಿದ್ದ ಬಗ್ಗೆ ನಮಗೆ ಗೊತ್ತಿತ್ತು ಎಂದರೆ ಸರಿ. ಸದರಿ ದಾವೆಯಲ್ಲಿ 2016 ರಲ್ಲಿ ತೀರ್ಪು ಆಗಿರುತ್ತದೆ ಎಂದು ನಮಗೆ 2021 ರಲ್ಲಿ ಎದುರುದಾರರು ದಾವಾ ಸ್ವತ್ತುಗಳಿಗೆ ತಮ್ಮ ಹೆಸರು ದಾಖಲಿಸಲು ಅರ್ಜಿ ಕೊಟ್ಟಾಗ ಮತ್ತು ಕಂದಾಯ ಇಲಾಖೆಯಿಂದ ನಮಗೆ ನೋಟಿಸ್ ಬಂದಾಗ ಗೊತ್ತಾಗಿರುತ್ತದೆ.

4. ನನಗೆ ಅಸಲು ದಾವೆ ನಂ.2/2008 ರ 21 ನೇ ಪ್ರತಿವಾದಿಯಾದ ದೊಡ್ಡ ಮುನಿಯಪ್ಪ ಬಿನ್ ಮುನಿಯಪ್ಪ ಮತ್ತು 22 ನೇ ಪ್ರತಿವಾದಿಯಾದ ಪಿಲ್ಲಪ್ಪ ಬಿನ್ ಮುನಿಗುರಪ್ಪ ರವರು ಗೊತ್ತು. ಸದರಿ 22 ನೇ ಪ್ರತಿವಾದಿಯು ನನಗೆ ಅಣ್ಣನಾಗಬೇಕು. ನಾನು ಮತ್ತು ನನ್ನ ಅಣ್ಣಂದಿರು ವಿಶ್ವಾಸದಿಂದ ಇರುತ್ತೇವೆ ಎಂದರೆ ಸರಿ. ಅಸಲು ದಾವೆ ನಂ.2/2008 ರಲ್ಲಿ ಸದರಿ 21 ಮತ್ತು 22 ನೇ ಪ್ರತಿವಾದಿಯರು ನಮ್ಮ ಪರವಾಗಿಯೂ ಸಹ ಸಾಕ್ಷ್ಯ ನುಡಿದಿದ್ದರು ಎಂದರೆ

ಸರಿಯಲ್ಲ. ಸದರಿಯವರಿಬ್ಬರು ದಾವೆಯಲ್ಲಿ ನಿಯಮಿತವಾಗಿ ಹಾಜರಾಗುತ್ತಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ನನಗೆ ಸದರಿ ದಾವೆಯ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ನಾವು ಎದುರುದಾರರಿಗೆ ತೊಂದರೆ ಕೊಡಲು ಈ ಸುಳ್ಳು ಪ್ರಕರಣ ದಾಖಲಿಸಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಸಲು ದಾವೆ ನಂ.2/2008 ರಲ್ಲಿ ನಮ್ಮ ತಂದೆ ಮತ್ತು ಅವರ ಎಲ್ಲಾ ಮಕ್ಕಳಿಗೂ ಸಹ ಭಾಗ ಕೊಡಲಾಗಿರುತ್ತದೆ ಎಂದರೆ ನಮಗೆ ಕಡಿಮೆ ಭಾಗ ಬಂದಿರುತ್ತದೆ ಮತ್ತು ಎದುರುದಾರರಿಗೆ ಹೆಚ್ಚು ಭಾಗ ಹೋಗಿರುತ್ತದೆ ಎಂದು ನುಡಿಯುತ್ತಾರೆ. ನಮಗೆ ಕಡಿಮೆ ಭಾಗ ಬಂದಿರುತ್ತದೆ ಮತ್ತು ಅದು ತಪ್ಪಾಗಿರುತ್ತದೆ ಎಂದು ನಾವು ತೀರ್ಪನ್ನು ಯಾವುದೇ ಅಪೀಲಿನಲ್ಲಿ ಪ್ರಶ್ನಿಸಿರುವುದಿಲ್ಲ ಕಾರಣ ನಮಗೆ ಅದರ ಬಗ್ಗೆ ಗೊತ್ತಾಗಿರಲಿಲ್ಲ. ಸದರಿ ತೀರ್ಪು ನ್ಯಾಯಬದ್ಧವಾಗಿರುತ್ತದೆ ಎಂದು ಹೇಳಿ ನನ್ನ ಸಹೋದರರು ಅದನ್ನು ಪ್ರಶ್ನಿಸಿರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ತೀರ್ಪಿನ ಆಧಾರದ ಮೇಲೆ ನಮ್ಮೆಲ್ಲರ ಹೆಸರುಗಳಿಗೆ ದಾವಾ ಸ್ವತ್ತುಗಳ ಖಾತೆ ಆಗಿರುತ್ತದೆ ಎಂದರೆ ಸರಿಯಲ್ಲ. ಹೀಗೆ ಖಾತೆ ಆಗಿದ್ದರೂ ಸಹ ಆಗಿರುವುದಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ನಾನು ಕೆಇಬಿ ಇಲಾಖೆಯಲ್ಲಿ ನೌಕರಿ ಮಾಡುತ್ತಿರುತ್ತೇನೆ ಎಂದರೆ ಸರಿ. ಎದುರುದಾರರು ಯಾವುದೇ ದಾಖಲೆಗಳಿಗೆ ನಮ್ಮ ಸಹಿಗಳನ್ನು ಪಡೆದುಕೊಂಡಿರುವುದಿಲ್ಲ ಹೊರತು ನಾವೇ ಸ್ವತಃ ಅಸಲು ದಾವೆ ನಂ.2/2008 ರಲ್ಲಿ ಹಾಜರಾಗಿ ದಾವೆ ನಡೆಸಿರುತ್ತೇವೆ ಎಂದರೆ ಸರಿಯಲ್ಲ. ನಾವು ದಾವೆ ನಡೆಸಿದ್ದರೂ ಸಹ ನಡೆಸಿರುವುದಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಜಾಂಶ ಗೊತ್ತಾಗುತ್ತದೆ ಎಂದು ನಾವು ಅಸಲು ದಾವೆ ನಂ.2/2008 ರ ಎಲ್ಲಾ ಪಕ್ಷಗಾರರನ್ನು ಈ ಅರ್ಜಿಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಎಲ್ಲಾ ಪಕ್ಷಗಾರರನ್ನು ಈ ಪ್ರಕರಣದಲ್ಲಿ ಸೇರಿಸಲು ನಮಗೆ ಯಾವುದೇ ತೊಂದರೆ ಇರಲಿಲ್ಲ.

6. ಅಸಲು ದಾವೆ ನಂ.2/2008 ರ ತೀರ್ಪಿನ ಆಧಾರದ ಮೇಲೆ ಎದುರುದಾರರು ಎಫ್.ಡಿ.ಪಿ.ನಂ.5/2022 ವನ್ನು ದಾಖಲಿಸಿರುತ್ತಾರೆ ಎಂದರೆ ಸರಿ. ಈ ಪ್ರರಕಣ ದಾಖಲಿಸಲು ನಮಗೆ ನ್ಯಾಯಬದ್ಧ ಕಾರಣಗಳು ಇರುವುದಿಲ್ಲ ಮತ್ತು ನಾವು ಎದರುದಾರರಿಗೆ ತೊಂದರೆ ಕೊಡಲು ಸುಳ್ಳು ಪ್ರಕರಣ ದಾಖಲಿಸಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮಗೆ 5 ನೇ ಎದರುದಾರರ ತಂದೆ ಮುನಿವೆಂಕಟಪ್ಪ ಗೊತ್ತು. ಸದರಿ ಮುನಿವೆಂಕಟಪ್ಪ ರವರೇ ಅಸಲು ದಾವೆ ನಂ.2/2008 ರ ಎಲ್ಲಾ ನಡುವಳಿಕೆಗಳನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನಾವು 3 ನೇ ಪ್ರತಿವಾದಿಯ ವಿರುದ್ಧ ವ್ಯಯಕ್ತಿಕ ದ್ವೇಷ ಇಟ್ಟುಕೊಂಡು ಈ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಮುಜಫರ್)
1 ನೇ ಅಪರ ಹಿರಿಯ ಸಿ.ಜೆ ಮತ್ತು ಜೆಎಂಎಫ್ ಸಿ
ಕೆಜಿಎಫ್ (ಸಂಚಾರಿ ಪೀಠ ಬಂಗಾರಪೇಟೆ).